ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕದಲ್ಲಿ ಹೆಲಿಪ್ಯಾಡ್ಸ್ ಮತ್ತು ಹೆಲಿಸರ್ವಿಸಸ್ ಅಭಿವೃದ್ಧಿ ಕುರಿತು.

ಓದಲಾಗಿದೆ: ಸರ್ಕಾರದ ಅಧಿಸೂಚನೆ ಸಂಖ್ಯೆ:ಮೂಅಇ 90 ರಾಅವಿ 2016, ದಿನಾಂಕ:28.04.2017.

*****

ಪ್ರಸ್ತಾವನೆ:

ಭಾರತ ಸರ್ಕಾರದ ನಾಗರೀಕ ವಿಮಾನಯಾನ ಸಚಿವಾಲಯವು ಪ್ರಾದೇಶಿಕ ವಾಯುಸೇವೆಯ ಅಭಿವೃದ್ಧಿಯನ್ನು ಉತ್ತೇಜನ ನೀಡುವ ಉದ್ದೇಶದಿಂದ ಪ್ರಾದೇಶಿಕ ಸಂಪರ್ಕ ಯೋಜನೆಯನ್ನು (RCS) ವ್ಯವಸ್ಥೆಯನ್ನು ಕಡಿಮೆ ಸೇವೆಯಲ್ಲಿರುವ ಮತ್ತು ಸೇವೆಯಲ್ಲಿರದ ವಿಮಾನ ನಿಲ್ದಾಣಗಳಿಗೆ ವಿಮಾನಯಾನ ಸಂಪರ್ಕವನ್ನು ಕಲ್ಪಿಸಲು ಮತ್ತು ಎಲ್ಲಾ ಜನಸಾಮಾನ್ಯರಿಗೆ ಕೈಗೆಟುಕುವ ವೆಚ್ಚದಲ್ಲಿ ವಾಯು / ವಿಮಾನ ಸೇವೆಯ ವ್ಯವಸ್ಥೆಯನ್ನು ಘೋಷಿಸಿದ್ದು, ಈ ನಿಟ್ಟಿನಲ್ಲಿ ನಾಗರೀಕ ವಿಮಾನಯಾನ ಸಚಿವಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಗಳ ನಡುವೆ ಸರ್ಕಾರವು ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ಸದರಿ ಯೋಜನೆಯಲ್ಲಿ RCS ವಿಮಾನಯಾನ ಸೇವೆಗಳಿಗೆ ರಿಯಾಯಿತಿಗಳನ್ನು (ಇಂಧನ (ಎ.ಟಿ.ಎಫ್) ಮಾರಾಟ ತೆರಿಗೆ 1% ಅಥವಾ ಕಡಿಮೆ. ವಿಮಾನ ನಿಲ್ದಾಣಕ್ಕೆ ಕನಿಷ್ಠ ಜಮೀನನ್ನು ಒದಗಿಸುವುದು, ಭದ್ರತಾ ಹಾಗೂ ಅಗ್ನಿಶಾಮಕ ಸೇವೆಯನ್ನು ಉಚಿತವಾಗಿ ಒದಗಿಸುವುದು ಮತ್ತು ವಿದ್ಯುತ್, ನೀರು ಮತ್ತು ಇತರೆ ಸೇವೆಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದು). ಒದಗಿಸಲು ದಿನಾಂಕ:28.04.2017 ರಂದು ರಾಜ್ಯಸರ್ಕಾರವು ಉಲ್ಲೇಖಿತ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಮುಂದುವರೆದು, ಪ್ರಾದೇಶಿಕ ವಿಮಾನಯಾನ ಸಂಪರ್ಕ ಯೋಜನೆಯ ಆವೃತಿ-2.0 ರಲ್ಲಿ ಭಾರತ ಸರ್ಕಾರವು ಆದ್ಯತಾ ಪ್ರದೇಶಗಳಿಗೆ ಹೆಲಿಕ್ಯಾಪ್ಟರ್ ಸೇವೆಗಳನ್ನೊಳಗೊಂಡಿರುತ್ತದೆ.

2. ಪ್ರಾದೇಶಿಕ ಮಟ್ಟದಲ್ಲಿ ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿಪಡಿಸುವುದರಿಂದ, ಅಗತ್ಯವಿರುವ ಮೂರನೇ ಹಂತದ "ಹಬ್ & ಸ್ಪೋಕ್" ವ್ಯವಸ್ಥೆಗೆ ಸಂಪರ್ಕವನ್ನು (ವಿಪತ್ತು ನಿರ್ವಹಣೆಯನ್ನೊಳಗೊಂಡ ತುರ್ತು ವೈದ್ಯಕೀಯ, ಇತ್ಯಾದಿ) ಒದಗಿಸಿದಂತಾಗುತ್ತದೆ. ನೋಡಲ್ ಏಜೆನ್ಸಿಯಾದ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮ ಇವರು ಸಲ್ಲಿಸಿದ ಪ್ರಸ್ತಾವನೆಯಲ್ಲಿ ಕರ್ನಾಟಕದ ಕಾರವಾರ, ಕೊಡಗು, ಬಾಗಲಕೋಟೆ ಮತ್ತು ವಿಜಯಪುರಗಳಲ್ಲಿ

ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿಪಡಿಸಲುವ ಆದ್ಯತಾ ಸ್ಥಳಗಳನ್ನಾಗಿ ಪರಿಗಣಿಸಲಾಗಿದೆ. ದಿನಕ್ಕೆ ಅಥವಾ ಪರ್ಯಾಯ ದಿನಗಳಲ್ಲಿ ಗರಿಷ್ಟ ಒಂದು ಹೆಲಿಕ್ಯಾಪ್ಟರ್ ಹಾರಾಟದ ನಿರೀಕ್ಷೆಯಿರುವುದರಿಂದ ಅಗತ್ಯವಿರುವ ಸೌಲಭ್ಯಗಳು ಮತ್ತು ಸೇವೆಗಳನ್ನು (ಭದ್ರತೆ. ಅಗ್ನಿಶಾಮಕ ಮತ್ತು ತುರ್ತುಪರಿಸ್ಥಿತಿ ಇತ್ಯಾದಿ) ಕನಿಷ್ಟ ಸೇವೆಗೆ ಸೀಮಿತಗೊಳಸುವುದು. ಈ ವ್ಯವಸ್ಥೆಯು ಸಣ್ಣ ವಿಮಾನಗಳ ಹಾರಾಟಕ್ಕೆ ಅನುಕೂಲವಾಗುವುದಲ್ಲದೇ ಇಳದು-ಹಾರಾಡಲು (hop-in, hop-out) ವ್ಯವಸ್ಥೆಗೆ ಅನುಕೂಲವಾಗುತ್ತದೆ.

3. ಹೆಲಿಸರ್ವಿಸಸ್ ಸೇವೆಗಳನ್ನು ಒದಗಿಸುವುದರಿಂದ ಸಂಬಂದಪಟ್ಟ ಮೂಲಸೌಲಭ್ಯಗಳನ್ನು ಸಮರ್ಥವಾಗಿ ಉಪಯೋಗಿಸಲು ಈ ಕೆಳಕಂಡ ಸಾಮಾನ್ಯ ಕಾರ್ಯವಿಧಾನಗಳನ್ನು ಅಳವಡಿಸಿಕೊಂಡು ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ.

1. ಗುಡ್ಡಗಾಡು ಪ್ರದೇಶಗಳಲ್ಲಿ ಮತ್ತು ಕಡಿಮೆ ಪ್ರಮಾಣದ ಪ್ರಯಾಣಿಕರು ಇರುವ ಸ್ಥಳಗಳಗೆ ಅನುಕೂಲವಾಗುವಂತೆ ಪ್ರವಾಸೋದ್ಯಮ ಮತ್ತು ತುರ್ತು ವೈದ್ಯಕೀಯ ಸೇವೆಗಳಗೆ ಅಗತ್ಯವಿರುವ ಸ್ಥಳಗಳಲ್ಲಿ ವಿಮಾನಯಾನವನ್ನು ಪ್ರೋತ್ಸಾಹಿಸಲು ಎಲ್ಲಾ ಸಂಭಾವ್ಯ ಸ್ಥಳಗಳಲ್ಲಿ ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿಪಡಿಸುವುದು.

2. ರಾಜ್ಯವು ಭರಿಸಬೇಕಾದ ಜಮೀನಿನ ವೆಚ್ಚವನ್ನು ಹೊರತುಪಡಿಸಿ, ಏಕ-ಇಂಜಿನ್ ವ್ಯವಸ್ಥೆಯುಳ್ಳ ಹೆಲಿಕ್ಯಾಪ್ಟರ್ ಕಾರ್ಯಾಚರಣೆಗೆ ರೂ.30 ರಿಂದ 50 ಲಕ್ಷ ಮತ್ತು ದ್ವಿ- ಇಂಜಿನ್ ವ್ಯವಸ್ಥೆಯುಳ್ಳ ಹೆಲಿಕ್ಯಾಪ್ಟರ್ ಕಾರ್ಯಾಚರಣೆಗೆ ರೂ.85 ರಿಂದ 100 ಲಕ್ಷಗಳಲ್ಲಿ ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿಪಡಿಸುವುದು.

3. ರಾಜ್ಯ ಸರ್ಕಾರವು ಆರ್.ಸಿ.ಎಸ್. ಯೋಜನೆಯಡಿಯಲ್ಲಿ ಏರ್‌ಲೈನ್ ಆಪರೇಟರ್ಸ್‌ಗಳಗೆ ರಿಯಾಯಿತಿ ದರದಲ್ಲಿ (ಮಾರಾಟ ತೆರಿಗೆ 1% ಅಥವಾ ಇಂಧನ (ಎ.ಟಿ.ಎಫ್), ಕನಿಷ್ಟ ಜಮೀನು, ಭದ್ರತಾ ಹಾಗೂ ಅಗ್ನಿಶಾಮಕ ಸೇವೆಯನ್ನು ಉಚಿತವಾಗಿ ಒದಗಿಸುವುದು, ನೀರು ಮತ್ತು ಇತರೆ ಉಪಯುಕ್ತತೆ ಸೇವೆಗಳನ್ನು ರಿಯಾಯಿತಿ ಒದಗಿಸುವುದು. ಇತ್ಯಾದಿ)

ಒದಗಿಸಲಾದ ಸೇವೆಗಳಂತೆಯೇ ಹೆಲಿಸರ್ವೀಸಸ್ ಯೋಜನೆಗೂ ಕೂಡ ಮುಂದುವರೆಸಲು.

4. ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿಪಡಿಸುವುದರಿಂದ ಸಣ್ಣ ವಿಮಾನ ನಿಲ್ದಾಣಗಳು /ಇಳಿದಾಣಗಳು ಮತ್ತು ಹೆಲಿಪ್ಯಾಡ್‌ಗಳ ಮಧ್ಯೆ ಅಗತ್ಯ ಸೇವೆ (ವಿಪತ್ತು ನಿರ್ವಹಣೆ, ತುರ್ತು ವೈದ್ಯಕೀಯ ಸೇವೆ ಮತ್ತು ಪ್ರವಾಸೋದ್ಯಮ) ಗಳನ್ನು ಒಳಗೊಂಡಂತೆ ಸಂಪರ್ಕವನ್ನು ಒದಗಿಸುತ್ತದೆ ಹಾಗೂ ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಕೊನೆಯ ಹಂತದ ಸಂಪರ್ಕ ಕಲ್ಪಿಸಲು ಅನುಕೂಲವಾಗುವುದು.

5. ಉತ್ತರ ಕನ್ನಡ (ಕಾರವಾರ), ಕೊಡಗು, ಬಾಗಲಕೋಟೆ ಮತ್ತು ವಿಜಯಪುರಗಳಲ್ಲಿ ಹೆಲಿಪ್ಯಾಡ್‌ಗಳನ್ನು ನೋಡಲ್ ಏಜೆನ್ಸಿಯಾದ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ಇವರ ಮೂಲಕ ಅಭಿವೃದ್ಧಿ ಪಡಿಸಲು ಆದ್ಯತಾ ಸ್ಥಳಗಳನ್ನಾಗಿ ಪರಿವರ್ತಿಸಲಾಗಿದೆ. ಗುರುತಿಸಲಾದ ಸ್ಥಳಗಳಲ್ಲಿ ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿ ಪಡಿಸಲು ಕನಿಷ್ಠ ಮೂಲಸೌಲಭ್ಯಗಳಾದ ಹೆಲಿಪ್ಯಾಡ್, 4-6 ಪ್ರಯಾಣಿಕರ ಸಣ್ಣ ಟರ್ಮಿನಲ್ ಲಾಂಜ್ ಚೈನ್-ಲಿಂಕ್ ಬೇಲಿ, ಕನಿಷ್ಠ ಭದ್ರತಾ ಸಿಬ್ಬಂದಿ, ಅಗ್ನಿಶಾಮಕ ಮತ್ತು ಆಂಬ್ಯುಲೆನ್ಸ್ ಸೇವೆಗಳನ್ನು (ಹೆಲಿಕ್ಯಾಪ್ಟರ್ ಕಾರ್ಯಚರಣೆಯಲ್ಲಿ ಮಾತ್ರ ಹತ್ತಿರದ ಸ್ಥಳಗಳಿಂದ ಒದಗಿಸುವುದು) ಏಕ ಇಂಜಿನ್ ವ್ಯವಸ್ಥೆಯುಳ್ಳ ಹೆಲಿಕ್ಯಾಪ್ಟರ್ ಕಾರ್ಯಚರಣೆಗೆ 30 ರಿಂದ 50 ಲಕ್ಷಗಳಿಗೆ ಮತ್ತು ದ್ವಿ ಇಂಜಿನ್ ವ್ಯವಸ್ಥೆಯುಳ್ಳ ಕಾರ್ಯಚರಣೆಗೆ ರೂ.85 ರಿಂದ 100 ಲಕ್ಷಗಳ ಅಂದಾಜಿನಲ್ಲಿ 2 ರಿಂದ 3 ಎಕರೆ ಜಮೀನಿನಲ್ಲಿ ವ್ಯವಸ್ಥೆ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ.

6. ಮೇಲಿನ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮೂಅಇ 97 ರಾಅವಿ 2017**

**ಬೆಂಗಳೂರು, ದಿನಾಂಕ : 31.01.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಈ ಕೆಳಕಂಡ ಅಂಶಗಳಿಗೆ ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ.

- ಕರ್ನಾಟಕ ರಾಜ್ಯದಲ್ಲಿ ಆದ್ಯತಾ ಸ್ಥಳಗಳಾದ ಕೊಡಗು, ಉತ್ತರ ಕನ್ನಡ (ಕಾರವಾರ), ಬಾಗಲಕೋಟೆ ಮತ್ತು ವಿಜಯಪುರಗಳಲ್ಲಿ ಇಂಜಿನಿಯರಿಂಗ್ ಪ್ರೋಕ್ಯೂರ್‌ಮೆಂಟ್ ಕನ್ಸ್‌ಟ್ರಕ್ಷನ್ (ಇ.ಪಿ.ಸಿ) ಮಾದರಿಯಲ್ಲಿ ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿ ಪಡಿಸಲು ಅಗತ್ಯವಿರುವ ಅನುದಾನ (Budgetary support) ದೊಂದಿಗೆ ಕೆ.ಎಸ್.ಐ.ಐ.ಡಿ.ಸಿ.ನ್ನು ನೋಡಲ್ ಏಜೆನ್ಸಿಯಾಗಿ ನೇಮಕ ಮಾಡಿ ಸದರಿ ಸಂಸ್ಥೆಯ ಮೂಲಕ ಕಾರ್ಯಗತಗೊಳಿಸಲು ತಾತ್ವಿಕ ಅನುಮೋದನೆ.

- ಅಗತ್ಯ ಸರ್ಕಾರಿ ಜಮೀನನ್ನು ಒದಗಿಸಲು.
- ಪ್ರಾದೇಶಿಕ ವಿಮಾನಯಾನ ಯೋಜನೆಯಲ್ಲಿಒದಗಿಸಿದಂತೆ ಹೆಲಿಪ್ಯಾಡ್ / ಹೆಲಿ ಸರ್ವೀಸಸ್‌ಗಳಿಗೆ ಈ ಕೆಳಕಂಡ ರಿಯಾಯಿತಿಗಳನ್ನು ಒದಗಿಸಲು
    * ಇಂಧನದ (ಎಟಿಎಫ್) ಮೇಲಿನ ಮಾರಾಟ ತೆರಿಗೆ 1% ಅಥವಾ ಕಡಿಮೆ
    * ಭದ್ರತಾ ಮತ್ತು ಅಗ್ನಿಶಾಮಕ ಸೇವೆಗಳನ್ನು ಉಚಿತವಾಗಿ ಒದಗಿಸಲು ಮತ್ತು
    * ವಿದ್ಯುಚ್ಛಕ್ತಿ, ನೀರು ಮತ್ತು ಇತರೆ ಉಪಯುಕ್ತತೆ ಸೇವೆಗಳನ್ನು ರಿಯಾಯಿತಿ ದರದಲ್ಲಿ ಇತ್ಯಾದಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಬಿನ್ ವನರಾಜ್. ಹೆ) 1/18
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ - ಪ್ರಕಟಣೆಗಾಗಿ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಒದಗಿಸಲು ಕೋರಿದೆ.

ಪ್ರತಿ:

1. ಪ್ರಧಾನ ಮಹಾಲೇಖಪಾಲರು (A & E), ಕರ್ನಾಟಕ, ಬೆಂಗಳೂರು, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ : 5329, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಕೊಡಗು, ಉತ್ತರ ಕನ್ನಡ (ಕಾರವಾರ), ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-I).
7. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.
9. ಸರ್ಕಾರದ ಉಪ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.
10. ಅಧೀನ ಕಾರ್ಯದರ್ಶಿ - (ಸಮನ್ವಯ) ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು.
11. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು.